ಶ್ರೀ ಜಿ. ಬಸಪ್ಪನವರು.—1950-51, 51-52 ನೇ ಸಾಲುಗಳಲ್ಲಿ ಮಂಜೂರು ಮಾಡಿರತಕ್ಕ ಸ್ಕೂಲುಗಳ ಸಂಖ್ಯೆಯಲ್ಲಿ ಕಟ್ಟಡ ಕಟ್ಟಿಸಿರುವುದು ಮಾತ್ರ ಸೇರಿದೆಯೋ ; ಇಲ್ಲದೇ ಇರುವುದೂ ಸೇರಿದೆಯೋ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಎರಡು ತರಹವೂ ಇದೆ.

ಶ್ರೀ ಜಿ. ಬಸಪ್ಪನವರು.—ಕಟ್ಟಡಕ್ಕೆ ಹಣವನ್ನು ಡಿಪಾಸಿಟ್ ಮಾಡಿರುವುದೂ ಕೂಡ ಇದರಲ್ಲಿ ಸೇರಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇದೆ.

ಶ್ರೀ ಜಿ. ಬಸಪ್ಪನವರು.—ಡಿಪಾಸಿಟ್ ಮಾಡಿದ್ದರೂ ಕೂಡ ಸ್ಕೂಲು ಮಂಜೂರು ಮಾಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಬಂದಿದೆ.

ಶ್ರೀ ಜಿ. ಬಸಪ್ಪನವರು.—4-5 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಡ ಪೂರ್ತಿಯಾಗಿ ಕಟ್ಟಿಕೊಟ್ಟಿದ್ದರೂ ಸ್ಕೂಲು ಮಂಜೂರು ಮಾಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಬಂದಿದೆ.

ಶ್ರೀ ಜಿ. ಬಸಪ್ಪನವರು.—ಅಂಥಾ ಕಟ್ಟಡಗಳ ಸಂಖ್ಯೆ ಎಷ್ಟಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸ್.

ಶ್ರೀ ಜಿ. ಬಸಪ್ಪನವರು.—ಈ ವರ್ಷ 1952-53 ರಲ್ಲಿ ಅಂಥಾ ಸಂದರ್ಭಗಳಿದ್ದರೆ ಅವೆಲ್ಲವನ್ನೂ ಮಂಜೂರು ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

Sri A. G. RAMACHANDRA RAO.—Priority will be given to such cases.

ಶ್ರೀ ಜಿ. ಬಸಪ್ಪನವರು.—1952-53 ಕ್ಕೆ ಎಷ್ಟು ಸ್ಕೂಲು ಮಂಜೂರುಮಾಡಬೇಕೆಂದು ಆಲೋಚನೆ ಮಾಡಲಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅಂದಾಜು ಮಾಡಿಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—(c) ಪ್ರಶ್ನೆಗೆ ಉತ್ತರವಾಗಿ 500 ಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕ ಗ್ರಾಮಗಳಿಗೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಅಂಥಾ ಗ್ರಾಮಗಳು ಎಷ್ಟಿವೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಓಟ್ಟು ಸಂಸ್ಥಾನಕ್ಕೆ ಇನ್ನು ಎಷ್ಟು ಪ್ರೈಮರಿ ಸ್ಕೂಲುಗಳ ಆವಶ್ಯಕತೆ ಇದೆ ಎಂಬುದನ್ನು ಪರಿಶೀಲಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇದಕ್ಕೆ ಹಿಂದೆ ಜವಾಬು ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಜವಾಬು ಬಂದಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು.—ಬಾರದಿದ್ದರೆ ವಿಚಾರ ಮಾಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು.—1946 ರಿಂದ ವರ್ಷಕ್ಕೆ 400 ಸ್ಕೂಲುಗಳಂತೆ ಕೊಡುತ್ತಾ ಇದ್ದುದು ಗೊತ್ತೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—2-3 ವರ್ಷ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಚೆಗೆ 98 ಸ್ಕೂಲುಗಳನ್ನು ಮಾತ್ರ ಕೊಡುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾಯರು.—ದುಡ್ಡಿನ ಅಭಾವ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಪ್ರೈಮರಿ ಸ್ಕೂಲು ವಿದ್ಯಾಭ್ಯಾಸ ಬಹಳ ಅತ್ಯಾವಶ್ಯಕ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ವಾಸ್ತವವಾಗಿಯೂ ಬಂದಿದೆ. ಹಣದ ಅಭಾವದಿಂದ ಸಂಖ್ಯೆ ಕಡಮೆ ಆಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಹೆಚ್ಚು ಮಾಡುವುದಕ್ಕೆ ಏನು ಮಾಡುತ್ತಾ ಇದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಯಾವ ರೀತಿ ವರಮಾನವನ್ನು ಜಾಸ್ತಿ ಮಾಡಬೇಕೆಂದು ಯೋಚನೆ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಹೆಚ್ಚು ಮಾಡುತ್ತೀರಾ ಇಲ್ಲವೇ ದುಡ್ಡಿನ ಅಭಾವ ಬಂದಿದೆಯೆಂದು ನಂತೇ ಹೋಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೆಚ್ಚು ಮಾಡಬೇಕೆಂದೇ ಸರ್ಕಾರದವರ ಅಭಿಲಾಷೆ

ಶ್ರೀ ಬಿ. ಹುಚ್ಚೇಗೌಡರು.—ಅಭಿಲಾಷೆಯಲ್ಲ. ಹೆಚ್ಚು ಮಾಡಬೇಕಾದರೆ ಆಯಾಯ ಸ್ಥಳದ ಆವಶ್ಯಕತೆ ನೋಡಿಕೊಂಡು ಮಾಡುತ್ತೀರಾ ? ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ಹೆಚ್ಚಾಗಿ ಕೊಟ್ಟ ಹಾಗಿದೆ. ಆವಶ್ಯಕತೆ ನೋಡಿಕೊಂಡು ಹಂಚಿಕೆ ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಸಾಧ್ಯವಾದ ಮಟ್ಟಿಗೂ ಎಲ್ಲಾ ಸ್ಥಳಗಳಲ್ಲೂ ಹಂಚುವುದಕ್ಕೆ ಪ್ರಯತ್ನಮಾಡುತ್ತೇವೆ.

Free Hostels for Scheduled Castes Students maintained by Government.

Q.—23. **Sri P. M. SWAMIDORAI** (Kolar Gold Fields—Scheduled Castes).—

Will the Government be pleased to state :—

the number of free hostels that are being maintained by them for the Scheduled Castes people in the State ?

A.—**Sri A. G. RAMACHANDRA RAO** (Minister for Law and Education).—Eleven.

Sri P. M. SWAMIDURAI.—At the same time, may I know the number of boarders in these hostels ?

Sri A. G. RAMACHANDRA RAO.—I can give you figures. The number of students in Government Depressed Class hostels and Adikarnataka Boarding Homes is 616. The number of students in Government aided Depressed Class hostels is 158.

Sri P. M. SWAMIDURAI.—What is the total cost per year in maintaining these hostels ?

Sri A. G. RAMACHANDRA RAO.—Notice.

Sri P. M. SWAMIDURAI.—Has any application been rejected till now for admision to any one of these hostels ?

Sri A. G. RAMACHANDRA RAO.—I want notice.

Sri P. M. SWAMIDURAI.—Will the Government consider the question of constructing a hostel at Kolar for Intermediate College students?

Sri A. G. RAMACHANDRA RAO.—We will examine it.

Sri P. M. SWAMIDURAI.—There is a high school hostel there. Will the Government consider the question of allowing all college students as boarders in that hostel?

Sri A. G. RAMACHANDRA RAO.—We will get it examined whether it is possible to admit all the college students.

ಶ್ರೀ ಬಿ. ರಾಚಯ್ಯನವರು (ಯಳಂದೂರು-ಅನುಸೂಚಿತ ಜಾತಿಗಳು).—ಈ 11 ಹಾಸ್ಟಲುಗಳಲ್ಲಿ ಹೈಸ್ಕೂಲು ವಿದ್ಯಾರ್ಥಿಗಳಿಗೆ ಎಷ್ಟು, ಮಿಡ್ಲ್ ಸ್ಕೂಲು ವಿದ್ಯಾರ್ಥಿಗಳಿಗೆ ಎಷ್ಟು, ಕಾಲೇಜು ವಿದ್ಯಾರ್ಥಿಗಳಿಗೆ ಎಷ್ಟು ಎಂಬುದನ್ನು ಹೇಳುತ್ತೀರಾ?

ಶ್ರೀ ಎ. ಜಿ ರಾಮಚಂದ್ರರಾಯರು.—ಈ 11 ರಲ್ಲಿ ಹೈಸ್ಕೂಲುಗಳಿಗೆ ಕೆಲವು, ಮಿಡ್ಲ್ ಸ್ಕೂಲುಗಳಿಗೆ ಕೆಲವು ಕೊಟ್ಟಿದೆ. ಕಾಲೇಜುಗಳಿಗೆ ಬೇರೆ ಏರ್ಪಾಡು ಇದೆ.

ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ).—ಸಂಸ್ಥಾನದಲ್ಲಿ ಎರ್ಲಾ ಹಾಸ್ಟಲುಗಳನ್ನು ಸರ್ಕಾರದವರೇ ಏರ್ಪಾಡು ಮಾಡುತ್ತಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾಯರು—ಸಾಮಾನ್ಯವಾಗಿ ಎರ್ಲಾ ಕಡೆಯೂ ಈ ಅನುಕೂಲ ಏರ್ಪಡಿಸುತ್ತಾ ಇದೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಸರ್ಕಾರಿ ಗ್ರಾಂಟ್ ಕೊಟ್ಟಮೇಲೆ ಎರ್ಲಾ ಕಡೆಯೂ ಜನರಲ್ ಹಾಸ್ಟಲುಗಳನ್ನು ಏರ್ಪಾಡು ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಪರ್ಯಾಲೋಚನೆಯಲ್ಲಿದೆ.

ಶ್ರೀ ಜಿ. ದುಗ್ಗಪ್ಪನವರು (ಕೊಳಲ್ಕೆರೆ-ಅನುಸೂಚಿತ ಜಾತಿಗಳು).—ಈ 11 ವಿದ್ಯಾರ್ಥಿ ನಿಲಯಗಳಲ್ಲಿ ಎಷ್ಟು ಕಡೆ ಸ್ವಂತ ಕಟ್ಟಡ ಇದೆ?

ಶ್ರೀ ಎ. ಜಿ ರಾಮಚಂದ್ರರಾಯರು.—ನೋಟೀಸ್.

ಶ್ರೀ ಜಿ. ದುಗ್ಗಪ್ಪನವರು.—1920ನೇ ಇಸವಿಯಿಂದಲೂ ನಡೆದುಕೊಂಡು ಬರುತ್ತಾ ಇರತಕ್ಕ ಸರ್ಕಾರಿ ಹಾಸ್ಟೆಲ್‌ಗೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಗೊತ್ತೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇರಬಹುದು.

Vocational Training in Middle Schools.

Q.—411. **Sri N. HUCHMASTHY GOWDA** (Huliyurdurga).—

Will the Government be pleased to state:—

(*a*) the number of Government, private aided and private unaided middle schools in Mysore State as on 31st March 1952 (information to be given talukwar and for Bangalore City);

(*b*) the number of middle schools in which vocational instruction is being imparted in subjects like agriculture, weaving, spinning, carpentry, etc.?

A.—**Sri A. G. RAMACHANDRA RAO** (Minister for Law and Education).—

(*a*) Statement appended below.

(*b*) 66.

Statement showing the number of Government, Private Aided and Private Un-aided Middle Schools in Mysore State as on 31st March 1952 (Talukwar and for Bangalore City).

Taluk	Pucca Middle Schools in the State			New Government Type Middle Schools
	Government	Aided	Unaided but Recognised	
City District, Bangalore—				
Bangalore City	29	18	5	16
Civil Area	...	7	20*	...

*Including 10 Higher Elementary Schools and 7 Middle Sections attached to High Schools.